ಸೊಸೆಗೂ ದುಡಿದು ಹಾಕಬೇಕಾದ ಪರಿಸ್ಥಿತಿ ಬಂತು. ನನಗೆ ಹೊಲದಲ್ಲಿ ಕೆಲಸ ಮಾಡಲು ಬರುವುದಿಲ್ಲ. ಅವನು ಹೊಲಕ್ಕೆ ಹೋದವನೇ ಅಲ್ಲವಂತೆ. ಚಿಕ್ಕವಯಸ್ಸಿಗೆ ಗಂಡನನ್ನು ಕಳೆದುಕೊಂಡು ತನ್ನ ಮೂರು ಮಕ್ಕಳನ್ನು ಸಾಕಲು ಪಾಡು ಪಡುತ್ತಿದ್ದ ಅತ್ತೆ, ಮದುವೆಯ ನಂತರ ಮನೆಯ ಸ್ಥಿತಿ ಸುಧಾರಿಸಬಹುದೆಂದು ನಂಬಿದ್ದರು. ಆದರೆ, ಇನ್ನೂ ಬಿಗಡಾಯಿಸಿದಾಗ ರುದ್ರಕಾಳಿಯಾದರು.

ಹೈಸ್ಕೂಲ್ ಮುಗಿಸಿ ಕೂಲಿ ಕೆಲ್ಸಕ್ಕೆ ಹೋಗುತ್ತಿದ್ದ ನಾದಿನಿಯಿಂದ ನಮ್ಮ ಮನೆಯ ಮೇಲು ಖರ್ಚು ನಡೆಯುತ್ತಿತ್ತು. ಸರಿಯಾಗಿ ಯಾವ ಕೆಲಸ ಮಾಡಲು ಬಾರದ ನಾನು ಆ ಮನೆಗೆ ಆರ್ಥಿಕ ಆಸರೆಯಾಗಲು ಅಸಮರ್ಥಳಾಗಿದ್ದೆ. ಆದರೆ, ನನ್ನನ್ನು ಮದುವೆಯಾದವನು ಮಾತ್ರ ಹೇಗೋ ಹಣ ತಂದು, ಇಲ್ಲ ತಾಯಿಯನ್ನು ಹೆದರಿಸಿಬೆದರಿಸಿ ಹಣ ಪಡೆದು ತನ್ನ ಮೂರನೇ ದರ್ಜೆಯ ಹವ್ಯಾಸಗಳನ್ನು ಪೂರೈಸಿಕೊಳ್ಳುತ್ತಿದ್ದ. ಒಬ್ಬನೇ ಮಗನೆಂದು ಸಿಕ್ಕಸಿಕ್ಕಲ್ಲಿ ಮುತ್ತುಕೊಟ್ಟು ಬೆಳೆಸಿದ್ದ ಅತ್ತೆ ಹತಾಶಳಾಗಿದ್ದಳು. ಯಾವ ಉದ್ದೇಶವಿಟ್ಟುಕೊಂಡು ಮಗನಿಗೆ ಮದುವೆ ಮಾಡಿದ್ದರೋ ಅದು ನೆರವೇರಿರಲಿಲ್ಲ. ಪೆದ್ದನ ಹೆಂಡತಿಯ ಸಂಗ ಮಾಡಿ ಮಗ ಹಾಳಾಗುತ್ತಿರುವನೆಂದು ಅತ್ತೆ ನನ್ನನ್ನು ಕಟ್ಟಿದ್ದಳು. ಆದರೆ, ಬಲಾತ್ಕಾರ ಮಾಡಿಸಿಕೊಳ್ಳಲು ಬಿಡುಬೀಸಾಗಿ ನಾನು ಮನೆಯಲ್ಲೇ ಇದ್ದರೂ, ಆ ಹೆಣ್ಣಿನ ಸಹವಾಸವನ್ನು ಅವನು ಬಿಡಲಿಲ್ಲ. ಮಗನನ್ನು ತಿದ್ದಲಾರದ ಅತ್ತೆ ನನ್ನ ಮೇಲೆ ಕೋಪ ಮಾಡಿಕೊಂಡು, ನಿಧಾನವಾಗಿ ಕೆಲಸ ಬೋಧಿಸತೊಡಗಿದರು. ಎಂಟತ್ತು ತಿಂಗಳಲ್ಲಿ ನಾನು ಕೂಲಿಗೆ ಹೋಗುವಷ್ಟು ಸುಧಾರಿಸಿದ್ದರಿಂದ ಅತ್ತೆ ಸ್ವಲ್ಪ ಗೆಲುವಾದರು" ಎಂದ ಅವಳ ಮಾತು ದೀರ್ಘವೆನಿಸಿತು. "ನಿಮ್ಮ ಗಂಡ ಬೇರೆ ಹೆಣ್ಣಿನೊಂದಿಗೆ ಸಂಬಂಧ ಇಟ್ಕೊಂಡಿದ್ದಾನೆ ಅಂತ ತಿಳ್ದಾಗ ನಿಮ್ಗೆ ಏನು ಅನ್ನಿಸ್ಲಿಲ್ವಾ?" ಎಂದೆ. ಅವಳು ನನಗೆ ಉತ್ತರಿಸದೆ ಮಾತು ಮುಂದುವರಿಸಿ, "ನಮ್ಮ ಪಕ್ಕದ ಮನೆಯವರ ಮದುವೆಗೆ ಹೋಗಲು ರೆಡಿಯಾಗಿ ನಿಂತಿದ್ದ ಅತ್ತೆ, 'ಎರ್ಡು ತಿಂಗ್ಳಿಂದ ಹೊರ್ಗೆ ಕುಂತಿಲ್ಲ, ಬಸ್ರೆನೇ?' ಎಂದು ಕೇಳಿದರು. ನಾನು 'ಹೌದು' ಎಂದು ತಲೆಯಲ್ಲಾಡಿಸಿದೆ. 'ನಾಳಿಂದ ನೀರು ತರಬೇಡ. ಹಂಗೆ ಕೂಲಿ ಕೆಲಸಕ್ಕೂ ಹೋಗಬೇಡ' ಎಂದು ಇನ್ನೂ ಮುಂದೆ ಹೇಳುತ್ತಿದ್ದರು. ಅಷ್ಟರಲ್ಲಿ ಬಸ್ ಹಾರ್ನ್ ಕೇಳಿ ಮದುವೆಗೆ ಹೊರಟು ಹೋದರು" ಎಂದು ಮಾತು ಮುಂದುವರಿಸುತ್ತಿದ್ದವಳಿಗೆ ತಡೆಹಾಕಿ, "ಪ್ರಗ್ನೆಂಟ್ ಖುಷಿಯಾಗಿರ್ಬೇಕಲ್ಲ!" ಎಂದೆ. ಒಣನಗೆಯೊಂದನ್ನು ನಕ್ಕ ಅವಳು ಖಾಲಿಯಾದ ಬಾಕ್ಸನ್ನು ಎತ್ತಿಕೊಂಡು, "ಟು ಬಿ ಕಂಟಿನ್ಯೂ" ಎಂದು ಹೊರಟೇ ಹೋದಳು.

ನನ್ನ ಸಿಲ್ಲಿ ಪ್ರಶ್ನೆಗಳು ಅವಳ ಗತವನ್ನು ಕೆದಕಬಹುದೆಂದು ನಾನಂದುಕೊಂಡಿರಲಿಲ್ಲ. ಆದರೆ, ಅವಳು ಎಲ್ಲವನ್ನು ನೆನೆಪಿಸಿಕೊಳ್ಳುತ್ತಿದ್ದಳು. ಅದರಿಂದ ಅವಳು ಮೌನಿಯಾಗಿಬಿಟ್ಟಳು. ಒಂದು ಮಗುವಿನ ತಾಯಿಯಾದರೂ, ಸೌಂದರ್ಯದ ಒಡತಿಯಾಗಿರುವ ಅವಳ ಬಗ್ಗೆ ಅಸೂಯೆಯಾಗಿದ್ದು ಸಹಜ. 'ಅವ್ಳಿಗೆ ಒಂದ್ಮಗು ಇದೆ? ಎಲ್ಲಿದೆ?' ಎನ್ನುವ ಪ್ರಶ್ನೆ ಕಾಡಿತಾದರೂ ಕೇಳಲಿಲ್ಲ. 'ಮುಂದುವರಿಯುತ್ತದೆ ಎಂದು ಹೇಳಿದ್ದಾಳಲ್ಲ! ಮುಂದಿನ ಭಾಗದಲ್ಲಿ ಬರಬಹುದು' ಎಂದುಕೊಳ್ಳುತ್ತಿರುವಾಗಲೇ, ಮುಂದಿನ ಟೇಬಲ್‌ನಲ್ಲಿ ಹೊಲಿದ ಬಟ್ಟೆಗಳನ್ನು ಪರಿಶೀಲನೆ ಮಾಡುತ್ತಿದ್ದ ಮನೋಜ್, ಅವಳು ರೆಸ್ಟ್ ರೂಮ್‌ಗೆ ಹೋಗಿದ್ದನ್ನು ಖಚಿತಪಡಿಸಿಕೊಂಡು, "ಇವತ್ತು ನಮ್ಮ ಇಡೀ ಕಂಪೆನಿಯಲ್ಲಿ ನಿಮ್ಮದೆ ವಿಷಯ. ಯಾವತ್ತು ಇಲ್ಲದ್ದು, ಇವತ್ತೇನು ವಿಶೇಷ? ಏನಾದ್ರೂ ಡೀಲಾ?" ಎಂದ. ಈ ಜನರ ಮನಃಸ್ಥಿತಿಯನ್ನು ತಿದ್ದಲು ನನ್ನಂಥ ಹುಲುಮಾನವಳಿಂದ ಸಾಧ್ಯವಿಲ್ಲವೆಂದು ತಿಳಿದಿತ್ತು. ಅವನಿಗೆ ಅವನದೇ ಭಾಷೆಯಲ್ಲಿ, "ಡೀಲು ಗೀಲು ಏನಿಲ್ಲ" ಎಂದೆ. "ಬೇಡ ಬಿಡಿ" ಎಂದು ಮುಂದೆ ತಿರುಗಿದ. ಅವನ ಮತ್ತು ನಫೀಸಳ ಪ್ರೇಮ ಪ್ರಕರಣ ಇಡೀ